**ಓ ಎಸ್ ನಂಃ 116-16**
**ಪಿ ಡಬ್ಲ್ಯೂ ಃ 1**

**ದಿಃ 21-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಸಿ ಜೆ ವಕೀಲರಿಂದ**

28. ನನ್ನ ಮಾವ ಚಲುವಯ್ಯ ಅವರು ಬದುಕಿರುವವರೆಗೂ ಮನೆಯ ಖರ್ಚು ವೆಚ್ಚವನ್ನು ನೋಡಿಕೊಳ್ಳುತ್ತಿದ್ದರು ಅಂದರೆ ನಿಜ. ಚಲುವಯ್ಯ ಅವರು ಬದುಕಿದ್ದಾಗ ಅವರೇ ಕುಟುಂಬದ ಮೂಲ ಪುರುಷನಾಗಿ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಅಂದರೆ ನಿಜ. ನನ್ನ ಮಾವ ಬದುಕಿದ್ದಾಗ ಸ.ನಂ.36 ರಲ್ಲಿ ನಮ್ಮ ಭಾಗದ 1 ಎಕರೆ 17 ಗುಂಟೆ ಜಮೀನನ್ನು ಅವರೇ ಅನುಭವಿಸುತ್ತಿದ್ದರು ಅಂದರೆ ಗೊತ್ತಿಲ್ಲ. ಭಾಗದಲ್ಲಿ ಸ.ನಂ.41 ರಲ್ಲಿ 2 ಎಕರೆ ಜಮೀನು ಚಲುವಯ್ಯ ಅವರಿಗೆ ಬಂದಿದ್ದು ಅವರೇ ಅದನ್ನು ಅನುಭವಿಸುತ್ತಿದ್ದರು ಅಂದರೆ ಗೊತ್ತಿಲ್ಲ. ಅದೇ ರೀತಿ ಸ.ನಂ.51 ರಲ್ಲಿ 2 ಎಕರೆ 26 ಗುಂಟೆ ಜಮೀನನ್ನು ಚಲುವಯ್ಯ ಅವರೇ ಅನುಭವಿಸುತ್ತಿದ್ದರು ಅಂದರೆ ಗೊತ್ತಿಲ್ಲ. ಸದರಿ ಜಮೀನುಗಳಲ್ಲಿ ಸ.ನಂ.36 ರಲ್ಲಿ 1 ಎಕರೆ ಜಮೀನನ್ನು ಚಲುವಯ್ಯ ಅವರು ತಮ್ಮ ಕುಟುಂಬದ ಪೋಷಣೆಗಾಗಿ 1972 ರಲ್ಲಿ ಮಾರಾಟ ಮಾಡಿದ್ದರು ಅಂದರೆ ಗೊತ್ತಿಲ್ಲ. ಚಲುವಯ್ಯ ಅವರು ತೀರಿಕೊಂಡ ನಂತರ ಬೆಟ್ಟಯ್ಯ ಹಾಗೂ ಚನ್ನಪಿಳ್ಳಯ್ಯ ಅವರು ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. ಚಲುವಯ್ಯ ಅವರು ತೀರಿಕೊಂಡ ನಂತರ ನನ್ನ ಗಂಡ ಬೆಟ್ಟಯ್ಯ ನಮ್ಮ ಸಂಸಾರವನ್ನು ನೋಡಿಕೊಳ್ಳುತ್ತಿದ್ದರು. 1972 ರಲ್ಲಿ ಆದ ಕ್ರಯಪತ್ರವನ್ನು ಬೆಟ್ಟಯ್ಯ, ಚನ್ನಪಿಳ್ಳಯ್ಯ ಹಾಗೂ ಅವರ ಮಕ್ಕಳನ್ನು ಅವರು ತಾವು ವಯಸ್ಕರಾದಾಗಿನಿಂದ ಪ್ರಶ್ನೆ ಮಾಡಿಲ್ಲ ಅಂದರೆ ಗೊತ್ತಿಲ್ಲ. ಸ.ನಂ.36 ರಲ್ಲಿ ಉಳಿಕೆ ಜಮೀನು 17 ಗುಂಟೆಯನ್ನು ಬೆಟ್ಟಯ್ಯ ಹಾಗೂ ಚನ್ನಪಿಳ್ಳಯ್ಯ ಅವರು ಎಂ ಆರ್ ನಂ.2/2009-2010 ರಂತೆ ಜಂಟಿ ಖಾತೆಯನ್ನು ಮಾಡಿಸಿಕೊಂಡಿದ್ದರು ಅಂದರೆ ಗೊತ್ತಿಲ್ಲ. ಅದೇ ರೀತಿ ಚನ್ನಪಿಳ್ಳಯ್ಯ ಅವರ ಪೌತಿ ಖಾತೆ ಅವರ ಮಕ್ಕಳ ಹೆಸರಿಗೆ 8 ವರೆ ಗುಂಟೆ ಜಮೀನು ಎಂ ಆರ್ ನಂ.39/2010-2011 ರಂತೆ ಆಗಿರುತ್ತದೆ ಅಂದರೆ ಗೊತ್ತಿಲ್ಲ. ಅದೇ ರೀತಿ ಎಂ ಆರ್ ನಂ.26/2014-2015 ರಂತೆ ಸ.ನಂ.36 ರಲ್ಲಿ 8 ವರೆ ಗುಂಟೆ ಜಮೀನು ಬೆಟ್ಟಯ್ಯ ಅವರು ತೀರಿಕೊಂಡ ನಂತರ ನನ್ನ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಅಂದರೆ ಗೊತ್ತಿಲ್ಲ. ಸದರಿ ಪೌತಿ ಖಾತೆಯ ಆಧಾರದ ಮೇರೆಗೆ ನಾನು ಕೆಎಚ್‌ಬಿ ಇಂದ ಪರಿಹಾರದ ಹಣವನ್ನು ಪಡೆದಿರುತ್ತೇನೆ ಅಂದರೆ ನಿಜ. 1972 ರ ಕ್ರಯಪತ್ರವನ್ನು ಬೆಟ್ಟಯ್ಯ, ಚನ್ನಪಿಳ್ಳಯ್ಯ ಮತ್ತು ಚಲುವಯ್ಯ ಅವರು ಪ್ರಶ್ನೆ ಮಾಡಿಲ್ಲ ಎಂಬುದಾಗಿ ನನ್ನ ವಾದ ಪತ್ರದಲ್ಲಿ ಹೇಳಿರುತ್ತೇನೋ ಇಲ್ಲವೋ ಗೊತ್ತಿಲ್ಲ.

ನನಗೆ ಅಯ್ಯಣ್ಣಪ್ಪನ ಮಗ ಚನ್ನಪ್ಪ ಗೊತ್ತಿದ್ದು ಆತ ನನ್ನ ಮಾವನ ಮಗ ಆಗಿರುತ್ತಾರೆ.

29. 2008 ರಲ್ಲಿ ಚನ್ನಪ್ಪ ಅವರು 1 ಮತ್ತು 4 ನೇ ಪ್ರತಿವಾದಿಗಳ ವಿರುದ್ದ ಒಂದು ದಾವೆಯನ್ನು ಹೂಡಿದ್ದರು ಅಂದರೆ ನಿಜ. ಆ ದಾವೆ ಏನು ಆಗಿರುತ್ತದೆ ಗೊತ್ತಿಲ್ಲ. ಸದರಿ ದಾವೆಯನ್ನು ಚನ್ನಪ್ಪ ಅವರು ನಡೆಸದೇ ಇರುವ ಕಾರಣದಿಂದ ಅದು ದಿ:23.06.2010 ರಂದು ವಜಾ ಆಗಿತ್ತು ಅಂದರೆ ಗೊತ್ತಿಲ್ಲ. ವಜಾ ಆದ ಆದೇಶದ ವಿರುದ್ದ ಚನ್ನಪ್ಪ ಅವರು ಏನು ಕ್ರಮ ತೆಗೆದುಕೊಂಡಿದ್ದರು ಗೊತ್ತಿಲ್ಲ. ಚಲುವಯ್ಯ ಅವರು 1 ಎಕರೆ ಜಮೀನನ್ನು ಮುತ್ತಯ್ಯ ಅವರಿಗೆ ಮಾರಾಟ ಮಾಡಿದ ನಂತರ ಅವರ ಹೆಸರಿಗೆ ಖಾತೆ ಆಗಿರುತ್ತದೆ ಅಂದರೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಮೋಸದಿಂದ ಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ. ಕ್ರಯ ಆದ ನಂತರ ಮುತ್ತಯ್ಯ ಅವರ ಹೆಸರಿಗೆ ಎಂ ಸಿ ಆರ್ ನಂ.525/1972-73 ರಂತೆ ಖಾತೆ ಆಗಿರುತ್ತದೆ ಅಂದರೆ ಸರಿಯಲ್ಲ. ನಂತರ ಮುತ್ತಯ್ಯ ಅವರ ಹೆಸರಿಗೆ ಐಲ್ ಮತ್ತು ಆರ್ ಆರ್ ಕಂದಾಯ ದಾಖಲೆಗಳು ಸಹ ಆಗಿರುತ್ತವೆ ಅಂದರೆ ಗೊತ್ತಿಲ್ಲ. ನಂತರ ಕ್ರಯ ಆದ ಬಗ್ಗೆ ಇಸಿ ಸಹ ಮುತ್ತಯ್ಯ ಅವರ ಹೆಸರಿಗೆ ಬರುತ್ತಿದೆ ಅಂದರೆ ಸರಿಯಲ್ಲ. ನಂತರ ಮುತ್ತಯ್ಯ ಅವರು ತಾವು ಖರೀದಿ ಮಾಡಿದ 1 ಎಕರೆ ಜಮೀನು ಮತ್ತು ಉಳಿಕೆ ಒಟ್ಟು ಕುಟುಂಬದ ಆಸ್ತಿಯನ್ನು ಕೆಂಪಣ್ಣ ಹಾಗೂ ಗಾಳಪ್ಪ ಅವರಿಗೆ ದಿ:08.03.1976 ರಲ್ಲಿ ಮೃತ್ಯುಪತ್ರ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ದಾವಾ ಆಸ್ತಿಗಳ ಸ್ವಾಧೀನತೆ ಹೊಂದಿರುತ್ತೇವೆ ಎಂದು ಹೇಳುತ್ತಾರೆ.

30. ಮೃತ್ಯುಪತ್ರದ ಆಧಾರದ ಮೇರೆ 1 ಎಕರೆ ಜಮೀನು ಮತ್ತು ಬೇರೆ ಒಟ್ಟು ಕುಟುಂಬದ ಆಸ್ತಿ ಗಾಳಪ್ಪ ಹಾಗೂ ಕೆಂಪಣ್ಣ ರವರ ಹೆಸರಿಗೆ ಖಾತೆ ಆಗಿರುತ್ತದೆ ಅಂದರೆ ಸರಿಯಲ್ಲ. ನಾನು ಈ ದಾವೆಯನ್ನು ಹೂಡಲು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಗೊತ್ತಿಲ್ಲ. ನಿಪಿ 23 ರಲ್ಲಿ ಭೂ ಸ್ವಾಧೀನತೆಗೆಂದು ಬಂದಾಗ ನನಗೆ ಗೊತ್ತಾಗಿದ್ದು ಭೂ ಸ್ವಾಧೀನತೆಗೆ 7 ವರ್ಷಗಳ ಹಿಂದೆ ಬಂದಿದ್ದರು. ನಿಪಿ 23 ರ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ 23 ರ ಎಸಿ ಅವರ ಆದೇಶವನ್ನು ಇಲ್ಲಿಯವರೆಗೂ ನಾವು ಪ್ರಶ್ನೆ ಮಾಡಿಲ್ಲ. ನಿಪಿ 2 ನ್ನು ನಾನು ಯಾವಾಗ ಕೊಟ್ಟಿರುತ್ತೇನೆ ಗೊತ್ತಿಲ್ಲ, ನೋಟೀಸನ್ನು ನಾನು ಯಾರಿಗೆ ಕೊಟ್ಟಿರುತ್ತೇನೆ ಗೊತ್ತಿಲ್ಲ. ನಿಪಿ 2 ನ್ನು ತಯಾರಿಸಲು ನಮ್ಮ ವಕೀಲರಿಗೆ ಯಾರು ಮಾಹಿತಿ ಕೊಟ್ಟರು ಗೊತ್ತಿಲ್ಲ. ನಾವು ಕೊಟ್ಟ ನೋಟೀಸು ಜಾರಿ ಆಗಿರುತ್ತದೋ ಇಲ್ಲವೋ ಗೊತ್ತಿಲ್ಲ. ನಿಪಿ 2 ರಲ್ಲಿ ಅರಸಮ್ಮ ಹಾಗೂ ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಗೊತ್ತಿಲ್ಲ. ನಿಪಿ 1 ರಲ್ಲಿರುವ ಎಲ್ಲಾ ವ್ಯಕ್ತಿಗಳನ್ನು ನಿಪಿ 2 ರಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಗೊತ್ತಿಲ್ಲ. ನಿಪಿ 1 ರಲ್ಲಿರುವ ಎಲ್ಲಾ ವ್ಯಕ್ತಿಗಳನ್ನು ನಿಪಿ 2 ರಲ್ಲಿ ಸೇರಿಸಲು ತೊಂದರೆ ಇರುವುದಿಲ್ಲ, ಸಾಕ್ಷಿ ಮುಂದುವರೆದು ಅದರ ಅವಶ್ಯಕತೆ ಇರುವುದಿಲ್ಲ ನಮ್ಮವರ ವಿರುದ್ದ ನಾವು ಮೊಕದ್ದಮೆ ಹೂಡಿದ್ದೆವು ಎಂದು ಹೇಳುತ್ತಾರೆ. ನಿಪಿ 2 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ನಿಪಿ 2 ಕ್ಕೆ ನಾನು ಸಹಿ ಮಾಡಿರುತ್ತೇನೋ ಇಲ್ಲವೋ ಗೊತ್ತಿಲ್ಲ. ನಿಪಿ 2 ರಲ್ಲಿ

ಏನು ಬರೆಯಲಾಗಿದೆ ಗೊತ್ತಿಲ್ಲ. ನಿಪಿ 11 ಮತ್ತು 12 ವಂಶ ವೃಕ್ಷ ನನ್ನದು ಹಾಗೂ ನನ್ನ ಮಕ್ಕಳದ್ದು ಇರುತ್ತದೆ. ನಿಪಿ 11 ಮತ್ತು 12 ರಲ್ಲಿ ನನ್ನ ಹೆಣ್ಣು ಮಕ್ಕಳನ್ನು ತೋರಿಸಿರುವುದಿಲ್ಲ ಅಂದರೆ ನಿಜ. ನಿಪಿ 11 ಮತ್ತು 12 ರಲ್ಲಿ ನನ್ನ ಮಾವ ಚಲುವಯ್ಯ, ಅವರ ಹೆಂಡತಿ, ಚನ್ನಪಿಳ್ಳಯ್ಯ ಮತ್ತು ಮುನಿಕೃಷ್ಣಪ್ಪ ಹಾಗೂ ಅವರ ವಾರಸುದಾರರುಗಳನ್ನು ತೋರಿಸಿಲ್ಲ ಅಂದರೆ ನಿಜ. ನಿಪಿ 11 ಮತ್ತು 12 ರಲ್ಲಿ ಚಲುವಯ್ಯ ಅವರ ತಂದೆಯಾದ ಚನ್ನಪ್ಪ ಹಾಗೂ ಅವರ ಸಹೋದರರನ್ನು ತೋರಿಸಿರುವುದಿಲ್ಲ ಅಂದರೆ ನಿಜ. ನಿಪಿ 11 ಮತ್ತು 12 ನ್ನು ತೋರಿಸಲಾಗಿ ಎಲ್ಲಿ ಮಾಡಿಸಿರುತ್ತೇನೆ ಗೊತ್ತಿಲ್ಲ. ನಿಪಿ 11 ಮತ್ತು 12 ರಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ, ಕಾರಣ ನಾನು ಓದಿಲ್ಲ.

31. ಕೆಐಚ್‌ಬಿ ಅವರು ಸ.ನಂ.36/1 ನ್ನು ಭೂ ಸ್ವಾಧೀನ ಮಾಡಿಕೊಂಡ ನಂತರ ಅದನ್ನು ಅಭಿವೃದ್ಧಿ ಪಡಿಸಿರುತ್ತಾರೆಂದರೆ ನಿಜ. ಕೆಐಚ್‌ಬಿ ಅವರು ಸ.ನಂ.36/1 ನ್ನು ಅಭಿವೃದ್ಧಿಪಡಿಸಿ ಸ್ವಾಧೀನತೆಯಲ್ಲಿದ್ದು ನಾವು ಸ್ವಾಧೀನತೆ ಹೊಂದಿಲ್ಲ, ಆದ ಕಾರಣ ನಾವು ಸರಿಯಾದ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಸರಿಯಾದ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿಲ್ಲ ಆದ ಕಾರಣ ಈ ದಾವೆ ಊರ್ಜಿತ ಆಗುವುದಿಲ್ಲ ಅಂದರೆ ಸರಿಯಲ್ಲ. ನಿಪಿ 15 ರಿಂದ 19 ಸ.ನಂ.36/1 8 ವರೆ ಗುಂಟೆ ಜಮೀನಿಗೆ ಸಂಬಂಧಿಸಿರುತ್ತದೆ ಅಂದರೆ ನಿಜ. ನಾನು ಹಾಜರುಪಡಿಸಿದ ಫೋಟೋಗಳು ಸ.ನಂ.36/1 8 ವರೆ ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಜಮೀನಿಗೆ ಸಂಬಂಧಿಸಿರುವುದಿಲ್ಲ. ನಿಪಿ 21 ಮತ್ತು 22 ಈ ದಾವೆಗೆ ಸಂಬಂಧಿಸಿರುವುದಿಲ್ಲ ಅಂದರೆ ಗೊತ್ತಿಲ್ಲ. 1972 ರಿಂದ ಗಾಳಪ್ಪ ಹಾಗೂ ಅರಸಮ್ಮ ಮತ್ತು ಅವರ ವಾರಸುದಾರರೇ ಸ.ನಂ.36/1 ರ ಮಾಲೀಕರು ಹಾಗೂ ಸ್ವಾಧೀನದಾರು ಆಗಿರುತ್ತಾರೆ ಅಂದರೆ ಸರಿಯಲ್ಲ. ಸದರಿಯವರ ಹೆಸರಿನಲ್ಲಿಯೇ ಸ.ನಂ.36/1 ರ ಖಾತೆ ಮತ್ತು ಕಂದಾಯ ರಸೀದಿಗಳು ಇರುತ್ತವೆ ಅಂದರೆ ಅವರು ಮಾಡಿಸಿಕೊಂಡಿರುತ್ತಾರೆಂದು ಹೇಳುತ್ತಾರೆ.

32. 1972 ರಿಂದ 2016 ರವರೆಗೆ ಆದ ಕಾಲವಿಳಂಬದ ಬಗ್ಗೆ ವಾದ ಪತ್ರದಲ್ಲಿ ಹೇಳಲಾಗಿದೆಯೋ ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ನಾನು ವಾದ ಪತ್ರದಲ್ಲಿ ಹೇಳಿಲ್ಲ ಆದ ಕಾರಣ ನನ್ನ ದಾವೆಯನ್ನು ವಜಾ ಮಾಡಬೇಕಾಗುತ್ತದೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಪ್ರತಿವಾದಿಗಳಿಗೆ ತೊಂದರೆ ಕೊಡಲು ನಾನು ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. 2011 ರಲ್ಲಿ ಸ.ನಂ.36/1 ನ್ನು ಕೆಐಚ್‌ಬಿ ಅವರು ಭೂ ಸ್ವಾಧೀನ ಮಾಡಿಕೊಂಡಿದ್ದು ಪರಿಹಾರದ ಹಣವನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.